ಇಲ್ಲಿಯೇ ಆರು ಕಿಲೋಮೀಟರ್ ದೂರದ ಮಾಚೇನಹಳ್ಳಿ ಎಂಬಲ್ಲಿ ಪುಟ್ಟ ಗುಡಿಸಿಲಿನಲ್ಲಿ ಇದ್ದಾಳೆ. ಹೂವು ಕಟ್ಟಿ ಮಾರುತ್ತಾಳೆ. ಪ್ರತಿ ದಿನ ಈ ತ್ಯಾಮಗೊಂಡ್ಲುವಿನ ಮಿಡ್ಲ್ ಸ್ಕೂಲ್‌ಗೆ ಬರುವ ಅವಳ ಮಗ ತನ್ನ ತಾಯಿ ಕಟ್ಟಿಕೊಟ್ಟ ಹೂವಿನ ಮಾಲೆ ತಂದು ಕೊಡುತ್ತಾನೆ. ನೋಡಿ... ಆ ಕನಕಾಂಬರ ಮಾಲೆ... ಮೇಷ್ಟ್ರ ಮಗಳು ಹೇಮಾ ಕಟ್ಟಿ ಕಳಿಸಿದ್ದು...'

'ಮಾಚೇನಹಳ್ಳಿಗೆ ಹೋಗಿ ಹೇಮಾಳನ್ನು ಭೇಟಿ ಮಾಡಬೇಕು' ದೇವಸ್ಥಾನದ ಹೊರಗೆ ಬರುವಷ್ಟರಲ್ಲಿ ನಾನು ನಿರ್ಧರಿಸಿದ್ದೆ. ಮಾಚೇನಹಳ್ಳಿಗೆ ಹೋಗಲು ಆಟೊ ಏನಾದರೂ ಸಿಗಬಹುದೇ ಎಂದು ಸುತ್ತ ಮುತ್ತ ನೋಡಿದೆ. ಯಾವುದೂ ಕಾಣಿಸಲಿಲ್ಲ. ರಸ್ತೆ ಬದಿಯಲ್ಲಿ ತುಸು ಹೊತ್ತು ನಿಂತೆ. ಕುಟು ಕುಟು ಎನ್ನುತ್ತಾ ಒಂದು ಟೆಂಪೊ ರಿಕ್ಷಾ ಬಂತು. ಕೈ ಅಡ್ಡ ಮಾಡಿದೆ. ರಿಕ್ಷಾ ಡ್ರೈವರ್, 'ಏನು?' ಎಂದು ಕೇಳುವವನಂತೆ ನನ್ನತ್ತ ನೋಡಿದ.

'ಮಾಚೇನಹಳ್ಳಿಗೆ ಹೋಗಬೇಕಾಗಿತ್ತು' ಎಂದೆ.

'ಹಿಂಬದಿ ತರಕಾರಿ ತುಂಬಿದೆ ಸಾರೂ. ಮುಂದೆ ನನ್ ಸೀಟ್‌ನಲ್ಲಿ ಅಡ್ಜಸ್ಟ್ ಮಾಡ್ಕ್ಯಂಡು ಕೂತ್‌ಕೋತೀರಾದ್ರೆ ಬನ್ನಿ' ಎಂದು ತುಸು ಜರುಗಿದ.

'ಆಯಿತಪ್ಪಾ...' ಎನ್ನುತ್ತಾ ಹತ್ತಿದೆ. ಡ್ರೈವರ್‌ನ ಪಕ್ಕದಲ್ಲಿ ತುಸು ಜಾಗ ಮಾಡಿಕೊಂಡು ಕುಳಿತೆ. ಹೆಗಲಿನಲ್ಲಿದ್ದ ಬ್ಯಾಗನ್ನು ಕಾಲಿನ ಮೇಲೆ ಇಟ್ಟುಕೊಂಡೆ. ರಿಕ್ಷಾ ಓಡಿತು.

'ಯಾವ ಊರಿನವರೋ ಅಣ್ಣಾವ್ರು?' ತಪಾಸಣೆ ಆರಂಭ ರಿಕ್ಷಾ ಡ್ರೈವರ್‌ನಿಂದ. ಹೇಳಿದಮೇಲೆ, 'ಮಾಚೇನಹಳ್ಳೀಲಿ ಯಾರನ್ನು ಕಾಣಬೇಕಿತ್ತೋ?' ಮತ್ತೆ ಪ್ರಶ್ನೆ.

'ಇಲ್ಲಿ ಆಂಜನೇಯಪ್ಪ ಅಂತ ಒಬ್ರು ಮೇಷ್ಟ್ರಿದ್ರಲ್ಲಾ... ಅವರ ಮಗಳು... ಹೇಮಾಂತ...' ಎಂದೆ.

'ಓಹ್... ಹೇಮಕ್ಕನ್ನೋರ್ನಾ?' ಆತ ಕೇಳಿದ.

'ಹ್ಞೂಂನಪ್ಪಾ... ಅವರು ನಿಮಗೆ ಗೊತ್ತಾ?' ನನ್ನ ಪ್ರಶ್ನೆ.

'ಗೊತ್ತಿಲ್ಲದೇ ಏನು ಅಣ್ಣಾವ್ರೇ... ಚೆನ್ನಾಗಿ ಗೊತ್ತು. ಅವ್ರ ಮನೆ ಸಮೀಪಾನೇ ನನ್ ಮನೇ ಇರೋದು' ಎಂದ ರಿಕ್ಷಾ ಡ್ರೈವರ್. ದಾರಿಯಲ್ಲಿ ನಮ್ಮ ನಡುವೆ ಅದೂ ಇದೂ ಮಾತು ಸಾಗಿತು. ರಸ್ತೆ ಏನೂ ಚೆನ್ನಾಗಿರಲಿಲ್ಲ. ಯಾವುದೋ ಕಾಲದಲ್ಲಿ ಬಳಿದಿದ್ದ ಟಾರು ಕಿತ್ತು ಹೋಗಿತ್ತು. ಹೊಂಡ ಗುಂಡಿ. ಅವನ್ನು ತಪ್ಪಿಸುತ್ತಾ ಡ್ರೈವರ್ ರಿಕ್ಷಾ ಓಡಿಸುತ್ತಿದ್ದ. ಅರ್ಧ ಗಂಟೆ ಬೇಕಾಯಿತು ಆರು ಕಿಲೋಮೀಟರ್ ಕ್ರಮಿಸಲು.

ಪುಟ್ಟ ಮನೆಯೊಂದರ ಇದಿರು ರಿಕ್ಷಾ ನಿಲ್ಲಿಸಿದ ಡ್ರೈವರ್, 'ಇದೇ ನೋಡಿ ಅಣ್ಣಾವ್ರೇ... ಹೇಮಕ್ಕೋರ ಮನೆ' ಎಂದವನೇ ರಿಕ್ಷಾದಿಂದ ಇಳಿದು, 'ಹೇಮಕ್ಕಾ... ನಿಮ್ ನೋಡೋದಕ್ಕೆ ದೂರ್ದ ಊರ್ನಿಂದ ಒಬ್ರು ಬಂದವ್ರೇ' ಎಂದ ಎತ್ತರದ ಧ್ವನಿಯಲ್ಲಿ.

ಆ ಪುಟ್ಟ ಮನೆಯ ಕಿರು ಬಾಗಿಲಿನಿಂದ ಯುವತಿಯೊಬ್ಬಳು ಇಣುಕಿದಳು: 'ಯಾರು... ಸೋಮಣ್ಣನಾ...' ಪ್ರಶ್ನೆ ಅವಳಿಂದ.

'ಹ್ಞೂಂ... ಮೀರಕ್ಕಾ... ನಾನೇ ತರಕಾರಿ ಸೋಮು... ಹೇಮಕ್ಕನ್ನೋರ್ನ ನೋಡೋಕೆ ಅಂತ...' ಎಂದ ಆತ ನನ್ನತ್ತ ತಿರುಗಿದ. ಆ ಯುವತಿಯ ದೃಷ್ಟಿ ಈಗ ನನ್ನತ್ತ ತಿರುಗಿತು.

'ಬನ್ನಿ... ಬನ್ನಿ... ಅಕ್ಕಾ ಇಲ್ಲೇ ಪಟೇಲರ ಮನೆಗೆ ಹೋಗಿದ್ದಾಳೆ. ಇನ್ನೇನು ಬರೋ ಹೊತ್ತು' ಎಂದಳು ಆ ಯುವತಿ. ಟೆಂಪೊ ರಿಕ್ಷಾದವನಿಗೆ ಹಣ ಕೊಡಲು ಜೇಬಿನಿಂದ ಹಣ ತೆಗೆದೆ.

'ಅಯ್ ಅದೆಲ್ಲಾ ಬೇಡಾ ಅಣ್ಣಾವ್ರೇ... ನಿಮ್ ಸಲುವಾಗಿ ನಾನೇನೂ ನನ್ ಗಾಡಿ ಓಡಿಸ್‌ಕಂಡ್ ಬಂದ್ನಾ? ತುಮ್ಕೂರು ಪ್ಯಾಟೆಯಿಂದ ತರಕಾರಿ ತರೋದಿತ್ತು... ತಂದೆ ಅಷ್ಟೇ. ನಿಮಗೊಂದು ಚೂರು ಜಾಗಾ ನನ್ ಪಕ್ಕದಲ್ಲಿ ಕೊಟ್ಟೆ ಅಷ್ಟೇ...' ಎಂದ ಆತ ಸಂಕೋಚದಿಂದ. ಹಣ ತೆಗೆದುಕೊಳ್ಳಲು ಆತ